**All India Radio: Bangalore**
**National Bulletins In Kannada**
**11.06.2025 / 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**11.06.2025 / 7.35 am**

**<><*<><>*><>**

ಮುಖ್ಯಾಂಶಗಳು

**೧. ಸರ್ವಪಕ್ಷ ನಿಯೋಗಗಳ ವಿವಿಧ ರಾಷ್ಟ್ರಗಳ ಭೇಟಿ ಕುರಿತು ಶ್ಲಾಘನೆ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ**

**೨. ಎರಡನೇ ಬಾರಿಗೆ ಮುಂದೂಡಲ್ಪಟ್ಟ ಆಕ್ಸಿಯಮ್-೪ ಮಿಷನ್**

**೩. ೨೦೨೯ರೊಳಗೆ ೩ ಲಕ್ಷ ಕೋಟಿ ರಕ್ಷಣಾ ಉತ್ಪಾದನೆ ಗುರಿ: ರಕ್ಷಣಾ ಸಚಿವ ರಾಜನಾಥ್ ಸಿಂಗ್**

**೪. ಕೇಂದ್ರ ಸಚಿವ ಪಿಯೂಷ್ ಗೋಯಲ್ ಸ್ವಿಟ್ಜರ್‌ಲೆಂಡ್ ಪ್ರವಾಸ; ಉತ್ಪಾದಕ ವ್ಯಾಪಾರ ದುಂಡು ಮೇಜಿನ ಸಭೆಯ ಸಹ ಅಧ್ಯಕ್ಷತೆ**

**<><*<><>*><>**

ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ಮತ್ತು ಅದರ ವಿರುದ್ಧದ ತೀವ್ರ ಹೋರಾಟದ ಅಗತ್ಯತದ ಕುರಿತಂತೆ ವಿವಿಧ ರಾಷ್ಟ್ರಗಳಲ್ಲಿ ಸ್ಪಷ್ಟವಾಗಿ ಮಂಡಿಸಿದ ಸರ್ವಪಕ್ಷ ಸಂಸದೀಯ ನಿಯೋಗಗಳ ಕಾರ್ಯ ಶ್ಲಾಘನೀಯ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಭಾರತ ಈ ವಿಷಯದಲ್ಲಿ ತನ್ನ ನಿಲುವುಗಳನ್ನು ಜಾಗಿತಕ ಮಟ್ಟದಲ್ಲಿ ಸ್ಪಷ್ಟಪಡಿಸಿರುವ ಬಗ್ಗೆ ತಮಗೆ ಹೆಮ್ಮೆ ಇದೆ ಎಂದರು. ಪ್ರಧಾನಿ ಅವರು ನಿನ್ನೆ ನವದೆಹಲಿಯ ತಮ್ಮ ನಿವಾಸದಲ್ಲಿ ೩೩ ವಿವಿಧ ರಾಷ್ಟ್ರಗಳ ರಾಜಧಾನಿಗಳಿಗೆ ಯಶಸ್ವಿಯಾಗಿ ಭೇಟಿ ನೀಡಿದ ಸರ್ವಪಕ್ಷ ನಿಯೋಗಗಳ ಸದಸ್ಯರಿಗೆ ಆತಿಥ್ಯ ನೀಡಿದರು.  ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ, "ಈ ಪ್ರತಿನಿಧಿಗಳು ಶಾಂತಿಯತ್ತ ಭಾರತದ ಬದ್ಧತೆ ಮತ್ತು ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವ ಅಗತ್ಯವನ್ನು ಜಾಗತಿಕ ವೇದಿಕೆಗಳಲ್ಲಿ ಸ್ಪಷ್ಟಪಡಿಸಿದರು ಎಂದು ಹೇಳಿದ್ದಾರೆ. ಈ ಸಭೆಯಲ್ಲಿ ನಿಯೋಗದ ಸದಸ್ಯರು ತಮ್ಮ ಅನುಭವಗಳನ್ನು ಪ್ರಧಾನಿ ಅವರೊಂದಿಗೆ ಹಂಚಿಕೊಂಡರು. ಹಾಲಿ ಸಂಸದರೂ ಸೇರಿದಂತೆ ೫೦ಕ್ಕೂ ಹೆಚ್ಚು ಜನರು ಈ ೭ ನಿಯೋಗಗಳ ಭಾಗವಾಗಿದ್ದರು.

**<><*<><>*><>**

ಭಾರತದ ಮೊದಲ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಸಾಗಿಸುವ ಆಕ್ಸಿಯಮ್ -೪ ಮಿಷನ್‌ನ ಉಡಾವಣೆಯನ್ನು ಇಂದು ಎರಡನೇ ಬಾರಿಗೆ ಮುಂದೂಡಲಾಗಿದೆ. ಫ್ಯಾಲ್ಕನ್ -೯ ರಾಕೆಟ್‌ನ ಪರಿಶೀಲನೆಯ ವೇಳೆ ದ್ರವ ಆಕ್ಸಿಜನ್ ಸೋರಿಕೆ ಕಂಡು ಬಂದ ಬೆನ್ನೆಲ್ಲೆ ಸ್ಪೇಸ್ ಎಕ್ಸ್ ತಂಡಕ್ಕೆ ದುರಸ್ತಿ ಕೆಲಸ ಕೈಗೊಳ್ಳಲು ಹೆಚ್ಚುವರಿ ಸಮಯ ನೀಡುವ ನಿಟ್ಟಿನಲ್ಲಿ ಆಕ್ಸಿಯಮ್ ಸ್ಪೇಸ್ ಮತ್ತು ಸ್ಪೇಸ್ ಎಕ್ಸ್ ಉಡಾವಣೆಯಿಂದ ಹಿಂದೆ ಸರಿದಿವೆ. ಯೋಜನೆಯ ಭಾಗವಾಗಿ ಶುಭಾಂಶು ಶುಕ್ಲಾ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ೧೪ ದಿನಗಳ ಕಾಲ ಇರಲಿದ್ದಾರೆ. ಈ ಮೂಲಕ ಹೊಸ ಮೈಲಿಗಲ್ಲು ಸಾಧಿಸಲು ಭಾರತ ಸಜ್ಜಾಗಿದೆ. ೨೦೨೦ರಲ್ಲಿ ಕಾರ್ಯಾಚರಣೆಗೆ ಶುಭಾಂಶು ಶುಕ್ಲಾ ಅವರನ್ನು ಆಯ್ಕೆ ಮಾಡಲಾಗಿತ್ತು. ನಂತರ ಅವರು ವಿವಿಧ ಬಾಹ್ಯಾಕಾಶ ಕೇಂದ್ರಗಳಲ್ಲಿ ಕಠಿಣ ತರಬೇತಿ ಪಡೆದ ಬಳಿಕ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಸೇರಿದ ಭಾರತದ ಮೊದಲ ಗಗನಯಾತ್ರಿಯಾಗಿ ನಾಮ ನಿರ್ದೇಶನಗೊಂಡಿದ್ದಾರೆ. ೧೪೦ ಕೋಟಿ ಭಾರತೀಯರನ್ನು ಪ್ರತಿನಿಧಿಸಲಿರುವ ಶುಕ್ಲಾ ಅವರೊಂದಿಗೆ ಅಮೆರಿಕದ ಸಂಶೋಧಕಿ ಡಾ. ಪೆಗ್ಗಿ ವಾಟ್ಸನ್, ಪೋಲೆಂಡ್‌ನ ವಿಜ್ಞಾನಿ ಸ್ಲಾವೋಸ್ಜ್ ಉಜ್ನಾನ್ಸ್ಕಿ ಮತ್ತು ಹಂಗೇರಿಯ ಮೆಕ್ಯಾನಿಕಲ್ ಎಂಜಿನಿಯರ್ ಟಿಬೋರ್ ಕಪು ಕೆಳ ಭೂಮಿಯ ಕಕ್ಷೆಗೆ ಮಾರ್ಗವನ್ನು ಮರು ವ್ಯಾಖ್ಯಾನಿಸುವ ಐತಿಹಾಸಿಕ ಕಾರ್ಯಾಚರಣೆಯಲ್ಲಿ ಬಾಹ್ಯಾಕಾಶಕ್ಕೆ ಪ್ರಯಾಣಿಸುತ್ತಿದ್ದಾರೆ. ಬಾಹ್ಯಾಕಾಶ ನಿಲ್ದಾಣದಲ್ಲಿ ೧೪ ದಿನಗಳ ವಾಸ್ತವ್ಯದ ಅವಧಿಯಲ್ಲಿ ಮಾನವ ಸಂಶೋಧನೆ, ಭೂಮಿಯ ಮೇಲೆ ಕೇಂದ್ರೀಕರಿಸುವ ೬೦ ಕ್ಕೂ ಹೆಚ್ಚು ವೈಜ್ಞಾನಿಕ ಪ್ರಯೋಗಗಳು ಮತ್ತು ಪ್ರದರ್ಶನಗಳನ್ನು ನಡೆಸಲಿದ್ದಾರೆ. ಅಂತರರಾಷ್ಟ್ರೀಯ ವೀಕ್ಷಣೆ ಮತ್ತು ಜೀವನ, ಜೈವಿಕ ಮತ್ತು ವಸ್ತು ವಿಜ್ಞಾನಗಳ ಕುರಿತಂತೆ ವಿಜ್ಞಾನಿಗಳ ತಂಡ ಅಧ್ಯಯನ ನಡೆಸಲಿದೆ.

<><*<><>*><>

ಕೇಂದ್ರ ಸರ್ಕಾರ ೨೦೨೯ ರೊಳಗೆ ૩ ಲಕ್ಷ ಕೋಟಿ ರಕ್ಷಣಾ ಉತ್ಪಾದನೆ ಸಾಧಿಸುವ ಗುರಿ ಹೊಂದಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ದೆಹ್ರಾದೂನ್‌ನಲ್ಲಿ ನಿನ್ನೆ 'ಜಾತೀಯ ಭದ್ರತೆ ಮತ್ತು ಉಗ್ರಗಾಮಿತ್ವ' ವಿಷಯದ ಮೇಲೆ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ೨೦೨೯ ರ ವೇಳೆಗೆ ಭಾರತವು, ರಕ್ಷಣಾ ಉತ್ಪನ್ನಗಳ ರಫ್ತು ಮೌಲ್ಯವನ್ನು ೫೦ ಸಾವಿರ ಕೋಟಿಗೆ ತಲುಪಿಸಲಿದೆ ಎಂದು ತಿಳಿಸಿದ್ದಾರೆ. ೨೦೧೪ರಲ್ಲಿ ವಾರ್ಷಿಕ ೪೦ ಸಾವಿರ ಕೋಟಿಗಳಿಷ್ಟಿದ್ದ ರಕ್ಷಣಾ ಉತ್ಪಾದನೆ ಇಂದು ೧ ಲಕ್ಷ ೩೦ ಸಾವಿರ ಕೋಟಿ ರೂಪಾಯಿಗೂ ಮೀರಿದೆ. ಪ್ರಸಕ್ತ ವರ್ಷದೊಳಗೆ ಈ ಉತ್ಪಾದನೆಯ ಪ್ರಮಾಣವನ್ನು ೧ ಲಕ್ಷ ೭೫ ಸಾವಿರ ಕೋಟಿ ರೂಪಾಯಿಗೆ ಏರಿಸುವ ಗುರಿ ಹೊಂದಿದೆ ಹೇಳಿದ್ದಾರೆ. ೨೦೨೪-೨೫ರ ಹಣಕಾಸು ವರ್ಷದಲ್ಲಿ ಭಾರತವು ೨೩ ಸಾವಿರದ ೬೨೨ ಕೋಟಿ ರೂಪಾಯಿ ಮೌಲ್ಯದ ರಕ್ಷಣಾ ಉತ್ಪನ್ನಗಳನ್ನು ರಫ್ತು ಮಾಡಿದ್ದು, ಪ್ರಪಂಚದ ಸುಮಾರು ೧೦೦ ದೇಶಗಳಿಗೆ ಭಾರತದಲ್ಲಿ ತಯಾರಾಗುವ ರಕ್ಷಣಾ ಸಾಧನಗಳನ್ನು ರಫ್ತು ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಭಾರತ, ತನ್ನ ಗಡಿಗಳನ್ನು ಕಾಪಾಡುವುದರ ಜೊತೆಗೆ ತಾಂತ್ರಿಕವಾಗಿ, ಆರ್ಥಿಕವಾಗಿ ಮತ್ತು ಕಾರ್ಯತಂತ್ರದ ಶಕ್ತಿಶಾಲಿ ವ್ಯವಸ್ಥೆಯನ್ನು ನಿರ್ಮಿಸುತ್ತಿದೆ ಎಂದು ಅವರು ಹೇಳಿದರು.

**ಧ್ವನಿ: ರಾಜನಾಥ್ ಸಿಂಗ್ ( ೨೦ ಸೆಕೆಂಡ್ಸ್)**

**<><*<><>*><>**

ದೇಶದಲ್ಲಿ ಪ್ರವಾಹ ನಿರ್ವಹಣೆಯ ಸನ್ನದ್ಧತೆಯನ್ನು ಪರಿಶೀಲಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನವದೆಹಲಿಯಲ್ಲಿ ನಿನ್ನೆ ಉನ್ನತ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ, ದೇಶದಲ್ಲಿ ಪ್ರವಾಹದ ಭೀತಿಯನ್ನು ತಗ್ಗಿಸಲು ತೆಗೆದುಕೊಳ್ಳಲಾಗುತ್ತಿರುವ ದೀರ್ಘಕಾಲೀನ ಕ್ರಮಗಳು ಮತ್ತು ಕಳೆದ ವರ್ಷ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳ ಬಳಿಕ ಕೈಗೊಂಡ ಕ್ರಮಗಳನ್ನು ಅವರು ಪರಿಶೀಲಿಸಿದರು. ಪ್ರವಾಹ ನಿರ್ವಹಣೆ ಮತ್ತು ಅವುಗಳ ಜಾಲ ವಿಸ್ತರಣೆಗಾಗಿ ಎಲ್ಲಾ ಸಂಸ್ಥೆಗಳು ಅಳವಡಿಸಿಕೊಂಡ ಹೊಸ ತಂತ್ರಜ್ಞಾನಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಗೃಹ ಸಚಿವಾಲಯ ತಿಳಿಸಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಭಾರತದ ವಿಪತ್ತು ನಿರ್ವಹಣೆಯು ಶೂನ್ಯ ಅವಘಡ ವಿಧಾನದೊಂದಿಗೆ ಮುಂದುವರಿಯುತ್ತಿದೆ ಎಂದು ಸಚಿವರು ಹೇಳಿದ್ದಾರೆ. ಮೂಲ ಮಟ್ಟಕ್ಕೆ ಹಿಂದಿನ ಎಚ್ಚರಿಕೆಗಳ ಪ್ರಸಾರವನ್ನು ಖಚಿತಪಡಿಸಿಕೊಳ್ಳಲು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು ಮತ್ತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು, ರಾಜ್ಯಗಳೊಂದಿಗೆ ಸಂಪೂರ್ಣ ಸಮನ್ವಯದೊಂದಿಗೆ ಪರಿಣಾಮಕಾರಿ ಪ್ರವಾಹ ನಿರ್ವಹಣೆಗೆ ಕೆಲಸ ಮಾಡುವಂತೆ ಸಚಿವ ಅಮಿತ್ ಶಾ ನಿರ್ದೇಶನ ನೀಡಿದರು. ಪ್ರವಾಹ ನಿಯಂತ್ರಣೆ ಮತ್ತು ನೀರಿನ ನಿರ್ವಹಣೆಗಾಗಿ ವಿವಿಧ ಕೇಂದ್ರ ಸಂಸ್ಥೆಗಳು ಬಾಹ್ಯಾಕಾಶ ತಂತ್ರಜ್ಞಾನವನ್ನು ಗರಿಷ್ಠವಾಗಿ ಬಳಸುವುದರ ಬಗ್ಗೆ ಸಚಿವರು ಪ್ರಸ್ತಾಪಿಸಿದರು.

**<><*<><>*><>**

ಸ್ವಿಟ್ಜರ್‌ಲೆಂಡ್ ಪ್ರವಾಸದಲ್ಲಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ನಿನ್ನೆ ಸ್ವಿಸ್ ಫೆಡ್ರಲ್ ಕೌನ್ಸಿಲರ್ ಗಾಯ್ ಪಾರ್ಮೆಲಿನ್ ಅವರೊಂದಿಗೆ ಮಿಷಿನರಿ ಎಲೆಕ್ಟ್ರಿಕ್ ಮತ್ತು ಲೋಹ ಕುರಿತು ಉತ್ಪಾದಕ ವ್ಯಾಪಾರ ದುಂಡು ಮೇಜಿನ ಸಭೆಯ ಸಹ ಅಧ್ಯಕ್ಷತೆ ವಹಿಸಿದ್ದರು. ಸಭೆಯ ಬಳಿಕ ಬರ್ನ್‌ನಲ್ಲಿ ಮಾತನಾಡಿದ ಸಚಿವ ಪಿಯೂಷ್ ಗೋಯಲ್, ಸಭೆಯಲ್ಲಿ ನಾವಿನ್ಯತೆ, ಪಾಲುದಾರಿಕೆಯನ್ನು ಉತ್ತೇಜಿಸುವುದು ಮತ್ತು ಜಂಟಿ ಕಾರ್ಯಪಡೆಯ ತರಬೇತಿ ಕುರಿತಂತೆ ಮಾತುಕತೆ ನಡೆಯಿತು ಎಂದು ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಅವರು, ಉಭಯ ರಾಷ್ಟ್ರಗಳು, ಭಾರತ ಐರೋಪ್ಯ ಮುಕ್ತ ವ್ಯಾಪಾರ ಒಪ್ಪಂದದ ಚಾಲನೆಯ ಬಳಿಕ ನೂತನ ಹೂಡಿಕೆ ಅವಕಾಶಗಳನ್ನು ಅನ್ವೇಶಿಸುವುದರ ಮೇಲೆ ಕೇಂದ್ರೀಕರಿಸಿದೆ ಎಂದು ಹೇಳಿದರು. ಬಳಿಕ ನಡೆದ ಸ್ವಿಸ್ ಮೆಮ್ ಕೈಗಾರಿಕಾ ದಿನದ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು, ಭಾರತ, ಕಳೆದ ೩೦ ವರ್ಷಗಳಲ್ಲಿ ೨೭೦ ಬಿಲಿಯನ್ ಡಾಲರ್ ಆರ್ಥಿಕತೆಯಿಂದ ೪ ಟ್ರಿಲಿಯನ್

ಡಾಲರ್ ಆರ್ಥಿಕತೆಯವರೆಗೆ ಬೆಳೆದಿದೆ. ತನ್ನ ನೂರನೇ ವರ್ಷದ ಸ್ವತಂತ್ರ್ಯೋವವನ್ನು ಆಚರಿಸುವ ವೇಳೆ ೩೦ ರಿಂದ ೩೫ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವ ಆಕಾಂಕ್ಷೆ ಹೊಂದಿದೆ ಎಂದು ತಿಳಿಸಿದರು. ಈ ವೇಳೆ ಅವರು, ಭಾರತೀಯ ವ್ಯಾಪಾರ ಚೇಂಬರ್ ಆಸೋಚ್ಹಾಮ್ ಮತ್ತು ಸ್ವಿಸ್ ಮೆಮ್ ನಡುವಿನ ಕೈಗಾರಿಕಾ ಪಾಲುದಾರಿಕೆ, ನಾವಿನ್ಯತೆ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವ ಪ್ರಮುಖ ತಿಳುವಳಿಕಾ ಒಪ್ಪಂದ ಸಹಿ ಹಾಕುವ ಸಮಾರಂಭಕ್ಕೆ ಸಾಕ್ಷಿಯಾದರು.

**<><*<><>*><>**

ಭಾರತದ ಇತಿಹಾಸದಲ್ಲಿ ಭಯೋತ್ಪಾದನೆಯ ವಿರುದ್ಧ ಕೈಗೊಂಡ ಅತಿದೊಡ್ಡ ಕ್ರಮ 'ಆಪರೇಷನ್ ಸಿಂದೂರ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಪಾದಿಸಿದ್ದಾರೆ. ಡೆಹ್ರಾಡೂನ್‌ನಲ್ಲಿ ನಿನ್ನೆ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಪಹಲ್ಗಾಮ್ ಭಯೋತ್ಪಾದಕ ದಾಳಿಯು ಕೇವಲ ಭಾರತೀಯ ನಾಗರಿಕರ ಮೇಲಿನ ದಾಳಿಯಲ್ಲ, ದೇಶದ ಸಾಮಾಜಿಕ ಏಕತೆಯ ಮೇಲಿನ ದಾಳಿಯೂ ಆಗಿದೆ ಎಂದು ಹೇಳಿದರು. ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಾಗರಿಕರನ್ನು ಅವರ ಧರ್ಮದ ಆಧಾರದ ಮೇಲೆ ಗುರಿಯಾಗಿಸಿಕೊಂಡರು, ಆದರೆ ಭಾರತ ಧರ್ಮವನ್ನು ಪರಿಗಣಿಸುವ ಮೂಲಕ ಅಲ್ಲ, ಬದಲಾಗಿ ಅವರ ಕಾರ್ಯಗಳ ಆಧಾರದ ಮೇಲೆ ನಿರ್ಣಾಯಕ ಕ್ರಮ ತೆಗೆದುಕೊಳ್ಳುವ ಮೂಲಕ ಪ್ರತಿಕ್ರಿಯಿಸಿದೆ ಎಂದು ರಕ್ಷಣಾ ಸಚಿವರು ಒತ್ತಿ ಹೇಳಿದರು. ಭಯೋತ್ಪಾದನೆಯನ್ನು ಎದುರಿಸಲು ಪಾಕಿಸ್ತಾನದ ಮೇಲೆ ಕಾರ್ಯತಂತ್ರದ, ರಾಜತಾಂತ್ರಿಕ ಮತ್ತು ಆರ್ಥಿಕ ಒತ್ತಡ ಹೇರುವಂತೆ ರಕ್ಷಣಾ ಸಚಿವರು ಅಂತಾರಾಷ್ಟ್ರೀಯ ಸಮುದಾಯವನ್ನು ಒತ್ತಾಯಿಸಿದರು. ಭಾರತ ತನ್ನ ಗಡಿಗಳನ್ನು ರಕ್ಷಿಸುತ್ತಿದೆ ಮತ್ತು ಅದನ್ನು ಕಾರ್ಯತಂತ್ರವಾಗಿ, ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಬಲಿಷ್ಠಗೊಳಿಸುವ ವ್ಯವಸ್ಥೆಯನ್ನು ರಚಿಸುತ್ತಿದೆ ಎಂದು ಸಚಿವರು ಹೇಳಿದರು.

**<><*<><>*><>**

ಭಾರತದ ಇತಿಹಾಸದಲ್ಲಿ ಭಯೋತ್ಪಾದನೆಯ ವಿರುದ್ಧ ಕೈಗೊಂಡ ಅತಿದೊಡ್ಡ ಕ್ರಮ 'ಆಪರೇಷನ್ ಸಿಂದೂರ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಪಾದಿಸಿದ್ದಾರೆ. ಡೆಹ್ರಾಡೂನ್‌ನಲ್ಲಿ ನಿನ್ನೆ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಪಹಲ್ಗಾಮ್ ಭಯೋತ್ಪಾದಕ ದಾಳಿಯು ಕೇವಲ ಭಾರತೀಯ ನಾಗರಿಕರ ಮೇಲಿನ ದಾಳಿಯಲ್ಲ, ದೇಶದ ಸಾಮಾಜಿಕ ಏಕತೆಯ ಮೇಲಿನ ದಾಳಿಯೂ ಆಗಿದೆ ಎಂದು ಹೇಳಿದರು. ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಾಗರಿಕರನ್ನು ಅವರ ಧರ್ಮದ ಆಧಾರದ ಮೇಲೆ ಗುರಿಯಾಗಿಸಿಕೊಂಡರು, ಆದರೆ ಭಾರತ ಧರ್ಮವನ್ನು ಪರಿಗಣಿಸುವ ಮೂಲಕ ಅಲ್ಲ, ಬದಲಾಗಿ ಅವರ ಕಾರ್ಯಗಳ ಆಧಾರದ ಮೇಲೆ ನಿರ್ಣಾಯಕ ಕ್ರಮ ತೆಗೆದುಕೊಳ್ಳುವ ಮೂಲಕ ಪ್ರತಿಕ್ರಿಯಿಸಿದೆ ಎಂದು ರಕ್ಷಣಾ ಸಚಿವರು ಒತ್ತಿ ಹೇಳಿದರು. ಭಯೋತ್ಪಾದನೆಯನ್ನು ಎದುರಿಸಲು ಪಾಕಿಸ್ತಾನದ ಮೇಲೆ ಕಾರ್ಯತಂತ್ರದ, ರಾಜತಾಂತ್ರಿಕ

ಮತ್ತು ಆರ್ಥಿಕ ಒತ್ತಡ ಹೇರುವಂತೆ ರಕ್ಷಣಾ ಸಚಿವರು ಅಂತಾರಾಷ್ಟ್ರೀಯ ಸಮುದಾಯವನ್ನು ಒತ್ತಾಯಿಸಿದರು. ಭಾರತ ತನ್ನ ಗಡಿಗಳನ್ನು ರಕ್ಷಿಸುತ್ತಿದೆ ಮತ್ತು ಅದನ್ನು ಕಾರ್ಯತಂತ್ರವಾಗಿ, ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಬಲಿಷ್ಠಗೊಳಿಸುವ ವ್ಯವಸ್ಥೆಯನ್ನು ರಚಿಸುತ್ತಿದೆ ಎಂದು ಸಚಿವರು ಹೇಳಿದರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**